## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಪ್ರಾಸಾ- 9
ಚಾಸಾ- 15

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ಎಸ್ |
| ತಂದೆಯ ಹೆಸರು | : | ಲೇಟ್ ಸಂಜೀವ |
| ವಯಸ್ಸು | : | 37 ವರ್ಷ |
| ವೃತ್ತಿ | : | ಚಾಲಕ |
| ವಾಸ | : | ಸೋಮವಾಪೇಟೆ. |

**ಸಾಕ್ಷಿಯನ್ನು ದಿನಾಂಕ 22-01-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

ನನಗೆ ಪ್ರಾಸಾ-8 ರವರ ಪರಿಚಯ ಇದೆ. ಅದೇ ರೀತಿ ಆರೋಪಿಯ ಪರಿಚಯ ಇದೆ. ನನ್ನ ಮನೆ ಸೋಮವಾರಪೇಟೆಯ ಕಾನ್ವೆಂಟ್ ಜಂಕ್ಷನ್ ನಲ್ಲಿ ಇದೆ. 2-3 ವರ್ಷಗಳ ಹಿಂದೆ ಪೊಲೀಸರು ನನ್ನನ್ನು ಸರ್ಕಲ್ ಇನ್ಸ್ ಪೆಕ್ಟರ್ ರವರ ಕಛೇರಿಗೆ ಸಂಜೆ 3.30 ರಿಂದ 4.00 ಗಂಟೆ ಸಮಯಕ್ಕೆ ಬರಲು ಹೇಳಿದ್ದರು. ನಾನು ಠಾಣೆಗೆ ಹೋಗಿದ್ದಾಗ ಅಲ್ಲಿ ಆರೋಪಿ ಇದ್ದರು. ಕಾನ್ವೆಂಟ್ ಬಾಣೆಯಲ್ಲಿ ಆರೋಪಿಯ ಮನೆಯಲ್ಲಿ ಮಹಜರ್ ಮಾಡಬೇಕು ಎಂದು ಹೇಳಿ ಪೊಲೀಸರು ನನ್ನನ್ನು ಕರೆದಿದ್ದರು. ಆ ಬಳಿಕ ಪೊಲೀಸರು ನಮ್ಮನ್ನು ಜೀಪಿನಲ್ಲಿ ಆರೋಪಿಯ ಮನೆಗೆ ಕರೆದುಕೊಂಡು ಹೋದರು. ಪೊಲೀಸರು ಆರೋಪಿಯ ಮನೆಯ ಬಳಿ ತಿರುಗಾಡಿದ ರೀತಿ ಮಾಡಿ ಜೀಪಿನಲ್ಲಿ ಇದ್ದ ಕೋವಿಯನ್ನು ಹೊರಗೆ ತೆಗೆದು ನಮ್ಮ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಳ್ಳುತ್ತೇವೆ ಎಂದು ಹೇಳಿ ಅದನ್ನು ಪ್ಯಾಕ್ ಮಾಡಿದರು. ಸದರಿ ಕೋವಿಯನ್ನುಪ್ಯಾಕ್ ಮಾಡುವ ಮೊದಲು ಪೊಲೀಸರು ಕೋವಿಯನ್ನುಪರಿಶೀಲಿಸಿದ್ದರು ಮತ್ತು ಖಾಲಿ ತೋಟ ಅವರ ಕೈಯಲ್ಲಿ ಇತ್ತು. ನಾನು ಈಗ ನಾನು ನೋಡುತ್ತಿರುವ ಮು.ಮಾ-1 ರ ಕೋವಿ ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪ ಪಡಿಸಿಕೊಂಡ ಕೋವಿ ಆಗಿರುತ್ತದೆ. ಅದೇ ರೀತಿ ಮು.ಮಾ-6 ರ ತೋಟವನ್ನೇ ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದಾಗಿದೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಗಳನ್ನು ಪೊಲೀಸರು ಖಾಲಿ ಪೇಪರ್ ನಲ್ಲಿ ಠಾಣೆಯಲ್ಲಿ ತೆಗೆದುಕೊಂಡಿದ್ದಾರೆ. ಸದರಿ ದಾಖಲೆಯನ್ನು ನಿಪಿ-8 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು **ನಿಪಿ-8(ಬಿ)** ಎಂದು ಗುರುತಿಸಲಾಯಿತು. ಮುಂದುವರೆದು ಪೊಲೀಸರು ನಮ್ಮನ್ನು ರಾಜಣ್ಣನವರ ಅಂಗಡಿಯ ಎದುರು ಕರೆದುಕೊಂಡು ಹೋದರು. ರಾಜಣ್ಣನವರ ಅಂಗಡಿಯ ಬಳಿ ಗನ್ ಮಿಸ್ ಫಾಯರ್ ಆಗಿದ್ದು ಎಂದು ಪೊಲೀಸರು ನನಗೆ ಹೇಳಿದ್ದು, ಆ ಸಂದರ್ಭದಲ್ಲಿ ಪೊಲೀಸರು ದಾಖಲೆಯನ್ನು ತಯಾರಿಸಿದ್ದರು. ನಿಪಿ-9 ಕ್ಕೂ ಸಹ ನಾನು ಠಾಣೆಯಲ್ಲಿ ಸಹಿ ಹಾಕಿದ್ದೇನೆ. ಸದರಿ ದಾಖಲೆಯಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ-9(ಬಿ)** ಎಂದು ಗುರುತಿಸಲಾಯಿತು. ನಿಪಿ-11 ರಿಂದ ನಿಪಿ-13 ರ ದಾಖಲೆಗಳನ್ನು ನಾನು ನೋಡಿಲ್ಲ. ನಿಪಿ-10 ರ ಫೋಟೊಗಳಲ್ಲಿ ನಾನು ಇದ್ದೇನೆ. ಸದರಿ ಫೋಟೊಗಳನ್ನು ಪೊಲೀಸರು ಆರೋಪಿಯ ಮನೆಯಲ್ಲಿ ಅದೇ ರೀತಿ ರಾಜಣ್ಣನವರ ಅಂಗಡಿಯ ಬಳಿಯಲ್ಲಿ ತೆಗೆದಿದ್ದರು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನಮುತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದ:</u>**

ನಾನು 9 ನೇ ತರಗತಿಯವರೆಗೆ ವಿದ್ಯಾಭಾಸ ಮಾಡಿದ್ದೇನೆ. ಈ ಹಿಂದೆಯು ಸಹ ಪೊಲೀಸರು ತನಿಖೆಗೆ ಸಹಾಯ ಮಾಡಲು ಕರೆದಿದ್ದರು. ಸಾಮಾನ್ಯವಾಗಿ ಪೊಲೀಸರು ವಸ್ತುಗಳನ್ನು ಹೇಗೆ ಅಮಾನತ್ತು ಪಡಿಸಿಕೊಳ್ಳುತ್ತಾರೆ ಎಂಬ ಬಗ್ಗೆ ಸಾಧಾರಣ ಜ್ಞಾನ ನನಗೆ ಇದೆ. ಪೊಲೀಸರು ಹೇಳಿದ ಪ್ರಕಾರ ನಾನು ಖಾಲಿ ಹಾಳೆಗೆ ಸಹಿ ಹಾಕಿದ್ದೇನೆ. ಸದರಿ ಹಾಳೆಗೆ ಸಹಿ ಹಾಕುವ ಸಂದರ್ಭದಲ್ಲಿ ಪೊಲೀಸರು ನನಗೆ ಹೆದರಿಸಿ, ಬೆದರಿಸಿ ಸಹಿ ಮಾಡಿಸಿಲ್ಲ ಅದೇ ರೀತಿ ಆಮಿಸಾವನ್ನು ಒಡ್ಡಿಲ್ಲ. ಆರೋಪಿ ನನ್ನ ಏರಿಯಾ, ಅದೇ ರೀತಿ ಸಾಕ್ಷಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಆರೋಪಿಯ ಮನೆ ಎಂದು ನುಡಿಯುತ್ತಾರೆ. ನಾನು ಬಿಜೆಪಿ ಪಕ್ಷಕ್ಕೆ ಸೇರಿದವನು ಆರೋಪಿ ಸಹ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯ್ತಿತಿಯ ಅಭ್ಯರ್ಥಿ. ಮು.ಮಾ-1 ರ ಕೋವಿಯನ್ನೇ ಆತನ ಮನೆಯ ಬೀರುವಿನಿಂದ ಪೊಲೀಸರ ಎದುರು ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ಸಂದರ್ಭದಲ್ಲಿ ನಿಪಿ-11 ರಿಂದ ನಿಪಿ-13 ರ ದಾಖಲೆಗಳನ್ನು ಆರೋಪಿ ನನ್ನ ಸಮಕ್ಷಮ ಹಾಜರುಪಡಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತಾರೆ. ಅದೇ ದಿನ

ಕೃತ್ಯಕ್ಕೆ ಸಂಬಂಧಿಸಿದ ಕಾರನ್ನು ಸಹ ಹಾಜರುಪಡಿಸಿದ್ದಾರೆ ಎಂದರೆ ಸದರಿ ಕಾರು ಮನೆಯ ಶೆಡ್ಡಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ರಾಜಣ್ಣನವರ ಅಂಗಡಿಯ ಬಳಿ ಆರೋಪಿ ತಾನು ಪ್ರಾಸಾ-1 ರವರಿಗೆ ಗುಂಡು ಹೊಡೆದ ಸ್ಥಳ ಎಂದು ಪೊಲೀಸರಿಗೆ ತೋರಿಸಿಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ನನಗೆ ಮಿಸ್ ಫಾಯರ್ ಆದ ಸ್ಥಳ ಎಂದು ಯಾವುದೇ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿ ಒಂದೇ ಊರಿನವರು ಹಾಗೂ ಒಂದೇ ಪಕ್ಷದವರು ಆದ ಕಾರಣ ಮು.ಮಾ-1 ರ ಕೋವಿ ಠಾಣೆಯಲ್ಲಿ ಮೊದಲೆ ಇತ್ತು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ತೋಟವನ್ನು ಪೊಲೀಸರು ನನ್ನ ಸಮಕ್ಷಮದಲ್ಲಿ ಆರೋಪಿ ಹಾಜರುಪಡಿಸಿದ ಕೋವಿಯನ್ನು ತೆಗೆದು ನೋಡಿದಾಗ ಅದರಲ್ಲಿ ಇದ್ದು, ಅದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಸಹಾಯ ಆಗಿಲಿ ಎಂಬ ಕಾರಣಕ್ಕಾಗಿ ಸದರಿ ಕೋವಿ ಆರೋಪಿಯ ಮನೆಯ ಬೀರುವಿನಲ್ಲಿ ಇದ್ದರು ಸಹ ಪೊಲೀಸ್ ಠಾಣೆಯಲ್ಲಿ ಇತ್ತು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ಹಾಗೂ ನಿಪಿ-9 ರ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡೆ ಸಹಿ ಹಾಕಿದ್ದೇನೆ ಆದರೆ ಖಾಲಿ ಹಾಳೆಗಳಿಗೆ ಸಹಿ ಹಾಕಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:</u>**

ನಾನು ಪರಿಶಿಷ್ಟ ಜಾತಿಗೆ ಸೇರಿದವನು. ನನ್ನ ಮನೆಯಪಕ್ಕದಲ್ಲಿ ಅಂದರೆ 15 ಅಡಿ ದೂರದಲ್ಲಿ ಪ್ರಾಸಾ-1 ರವರ ಮನೆ ಇದೆ. ನನ್ನ ಮನೆಗೂ ಆರೋಪಿಯ ಮನೆಗು 500 ರಿಂದ 600 ಮೀಟರ್ ದೂರ ಆಗಬಹುದು. ನನಗೂ ಹಾಗೂ ಆರೋಪಿಗೂ ಯಾವುದೇ ವ್ಯವಹಾರಿಕ ಸಂಬಂಧ ಇಲ್ಲ ನೋಡಿ ಪರಿಚಯ ಮಾತ್ರ. ನಿಪಿ-8 ಹಾಗೂ 9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ